


ಜಾನಪದ ಪರಂಪರೆಯು ಬೀರುವ ಆಧ್ಯಾತ್ಮಿಕ ಕಂಪು ಕಾಡಿನ ಕುಸುಮದಂತೆ ಸಹಜ, ನೈಸರ್ಗಿಕ ಮತ್ತು ಸರಳ. ಹೃದಯಾಂತರಾಳದಿಂದ ಬಂದ ಭಾವನೆಗಳ ಭವನ ಅದು. ಅದರ ಪುಣ್ಯಕ್ಷೇತ್ರಗಳ ನಿರೂಪಣೆಯನ್ನು ಸುಂದರವಾಗಿ ಮಾಡಿಕೊಟ್ಟಿರುವ ಲೇಖಕರು ನಂಜನಗೂಡಿನ ಸರ್ಕಾರಿ ಪದವಿ ಕಾಲೇಜಿನ ಪ್ರಾಂಶುಪಾಲರು; ಉತ್ತಮ ಲೇಖಕರು ಮತ್ತು ವಾಗ್ಮಿಗಳು.

**ಅ**ಕ್ಷರವಿದ್ಯೆಯ ಕಲಿಕೆಯನ್ನು ಆಧಾರವಾಗಿಟ್ಟುಕೊಂಡು ಮಾನವ ಸಮಾಜವನ್ನು **ಶಿಷ್ಟ** ಮತ್ತು **ಜನಪದ** ಎಂದು ವಿಂಗಡಿಸಲಾಗಿದೆ. ಶಿಷ್ಟರು ಎಂದರೆ ವಿದ್ಯಾವಂತರು, ಶ್ರೀಮಂತರು, ಅಧಿಕಾರಸ್ಥರು, ಮೇಲ್ವರ್ಗದವರು, ನಗರದವರು ಇತ್ಯಾದಿ ವಿವರಣೆ ನೀಡುತ್ತೇವೆ. ಇದಕ್ಕೆ ಪರ್ಯಾಯವಾಗಿ ಅವಿದ್ಯಾವಂತರು, ದೀನರು, ದಲಿತರು, ಬಡವರು, ಕೆಳವರ್ಗದವರು, ಗ್ರಾಮಸ್ಥರು ಮುಂತಾದ ಒಂದು ಸಮಾಜದ ಬಹುಸಂಖ್ಯಾತ ಜನಸಾಮಾನ್ಯರು ಜನಪದರು ಎನಿಸಿಕೊಳ್ಳುತ್ತಾರೆ.

ಮನುಷ್ಯರು ಶಿಷ್ಟರೇ ಆಗಲಿ, ಜನಪದರೇ ಆಗಲಿ ಎಲ್ಲರೂ ಭಗವಂತನ ಸೃಷ್ಟಿಯೆ. ಸಮಾಜದ ತಾರತಮ್ಯಗಳೇನೇ ಇರಲಿ ಭಗವಂತನ ದೃಷ್ಟಿಯಲ್ಲಿ ಎಲ್ಲರೂ ಸಮಾನರೆ. ಅಂತೆಯೇ ತಮ್ಮ ಸೃಷ್ಟಿಗೆ ಕಾರಣನಾದ ಸೃಷ್ಟಿಕರ್ತನನ್ನು ಕುರಿತು ಎಲ್ಲರೂ ತಮ್ಮ ತಮ್ಮ ಮಿತಿಯಲ್ಲಿ ಚಿಂತನೆ ನಡೆಸಿದ್ದಾರೆ. ಒಂದು ದೃಷ್ಟಿಯಲ್ಲಿ ಶಿಷ್ಟಸಮಾಜದ ಚಿಂತನೆಗಿಂತ ಜನಪದ ಸಮಾಜದ ಚಿಂತನೆ ವಿಶಿಷ್ಟ, ವಿಭಿನ್ನ.

### ಮನೆಯಂಗಳವೆ ಮಹಾದೇವನ ತಾಣ

ಜನಪದರ ಪ್ರಕಾರ ದೇವರು ಅಮೂರ್ತನಲ್ಲ, ಮೂರ್ತ. ಅವರು ಅವನನ್ನು ಸಾಂಕೇತಿಕವಾಗಿ ಕಾಣುವ ಬದಲು ಸಾಕ್ಷಾತ್ತಾಗಿಯೇ ಕಂಡವರು. ಅಂತೆಯೇ ದೇವರಿರುವ ತಾಣಗಳನ್ನು ಹುಡುಕಿಕೊಂಡು ದೂರದೂರದ ಊರುಗಳಿಗೆ ಹೋದವರಲ್ಲ, ತಾವಿರುವ ತಾಣಗಳನ್ನೇ ಪುಣ್ಯಕ್ಷೇತ್ರಗಳನ್ನಾಗಿಸಿಕೊಂಡವರು. ತೀರಾ ಸರಳವಾಗಿ ತಮ್ಮ ಮನೆಯಂಗಳದಲ್ಲಿಯೆ ಅನುದಿನ ಅವರು ದೇವರನ್ನು ಕಂಡಿದ್ದಾರೆ. ಅವರು ಕಂಡಿರುವ ದೇವರು ಬೆರಗು ಹುಟ್ಟಿಸುವಷ್ಟು ಸುಲಭಲಭ್ಯ.

ಹೂವಿನ್ಯಾಗ ಹುದಗ್ಯಾನ ಮೂಲ್ಯಾಗ ಮಲಗ್ಯಾನ
ಮೊಗ್ಗ್ಯಾಗ ಕಣ್ಣ ತೆರೆದಾನ । ಲಿಂಗಯ್ಯನ
ನೋಡಟಿಗಿ ನಿದ್ದಿ ಬಯಲಾಗಿ ॥

ಈ ತ್ರಿಪದಿ ಶಿಷ್ಟಸಮಾಜದ 'ಸೌಂದರ್ಯವೇ ದೇವರು' ಎಂಬ ವ್ಯಾಖ್ಯೆಗೆ ಬರೆದ ಭಾಷ್ಯದಂತಿದೆ. ಆದರೆ ಜನಪದರು ಸೌಂದರ್ಯದಲ್ಲಿ ದೇವರನ್ನು ಗುರುತಿಸಿರುವುದಕ್ಕಿಂತ, ದೇವರ ಸೃಷ್ಟಿಯ ಪ್ರತಿಯೊಂದರಲ್ಲಿಯೂ ಆತ ಅಂತರ್ಗತನಾಗಿದ್ದಾನೆ ಎಂಬ ಮುಗ್ಧನಂಬಿಕೆಯಿಂದ ಆತನನ್ನು ಎಲ್ಲಿಯೋ ಕಾಣುವುದಕ್ಕಿಂತ, ಎಲ್ಲೆಲ್ಲಿಯೂ ಕಂಡಿದ್ದಾರೆ. ಅವರಿಗೆ ದೇವರು ಮೊಗ್ಗು–ಹೂವು–ಹಣ್ಣಿನಲ್ಲಿದ್ದಾನೆ; ನದಿ–ಹಳ್ಳ–ಕೊಳ್ಳ–ಗುಡ್ಡ–ಬೆಟ್ಟ, ಹೀಗೆ ಇಡೀ ಭೂಮಂಡಲದಲ್ಲಿ ಎಲ್ಲೆಲ್ಲಿಯೂ ಇದ್ದಾನೆ. ಒಬ್ಬ ಜನಪದ ತಾಯಿ ಹೀಗೆ ಹೇಳುತ್ತಾಳೆ:

ಬೆಳಗ್ಯಾಗಿ ನಾನೆದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗಿ ಬೆಳೆಯೋಳ । ಭೂಮಿತಾಯಿ
ಎದ್ದೊಂದು ಗಳಿಗೆ ನೆನೆದೇನ ॥

ಜನಪದರಿಗೆ ಭೂದೇವಿಯೇ ದೈವ, ನೆಲವೇ ದೇಗುಲ. ನೆಲದೇಗುಲದಲ್ಲಿ ಅವರು ಕೈಲಾಸ, ವೈಕುಂಠ, ಸತ್ಯಲೋಕ, ಸ್ವರ್ಗಗಳನ್ನು ಕಂಡಿದ್ದಾರೆ. ಕಾಶಿ, ರಾಮೇಶ್ವರ, ಕೇದಾರ, ಬದರಿಗಳನ್ನು ಅವರು ಹುಡುಕಿಕೊಂಡು ಹೋಗಿ ನೋಡಲು ಹಾತೊರೆದವರಲ್ಲ. ಬದಲಾಗಿ ತಮ್ಮ ಕುಟುಂಬ ಸಂಬಂಧದಲ್ಲಿಯೇ ಎಲ್ಲ ಪುಣ್ಯಕ್ಷೇತ್ರಗಳನ್ನೂ ನೋಡುವ ಪ್ರಯತ್ನ ಮಾಡಿದ್ದಾರೆ.

ಕಾಶೀಗಿ ಹೋಗಲಾಕ ಏಸೊಂದು ದಿನ ಬೇಕ
ತಾಸ್ಹೊತ್ತಿನ್ಹಾದಿ ತವರೂರ । ಮನಿಯಾಗ
ಕಾಸಿ ಕುಂತಾಳ ಹಡೆದವ್ವ ॥

ಕಾಶಿಯನ್ನು ನೋಡುವುದರಿಂದ ದೊರೆಯುವ ಪುಣ್ಯ ಮತ್ತು ಧನ್ಯತೆಯನ್ನು ತಾಯಿಯ ದರ್ಶನದಲ್ಲಿಯೆ ಪಡೆಯ ಬಹುದು ಎನ್ನುವ ಈ ಮಾತಿನ ಹಿಂದೆ ಇರುವ ತರ್ಕ ಮತ್ತು ಅರ್ಥವಂತಿಕೆಯನ್ನು ನಾವು ಗಮನಿಸಬೇಕು.

ಜನಪದರ ದೇವರ ಪೂಜಾವಿಧಾನ ಕೂಡ ಶಿಷ್ಟ ಸಮಾಜದ ದೇಗುಲಸಂಸ್ಕೃತಿಗಿಂತ ಭಿನ್ನವಾಗಿದೆ. ಅವರ ದೇವರಪೂಜೆಗೆ ಪುರೋಹಿತರು ಬೇಕಿಲ್ಲ, ಮಧ್ಯವರ್ತಿಗಳ ಅಗತ್ಯವಿಲ್ಲ. ಪ್ರಕೃತಿಯಲ್ಲಿ ಅನುದಿನ ನಡೆಯುವ ಸೃಷ್ಟಿಕ್ರಿಯೆಯೆ ನೈಜ ದೇವಪೂಜೆ:

ಆರಾಣದಡವ್ಯಾಗ ಧೂಪದ ಹೊಗೆಯೆದ್ದು
ಆಗಸದ ಘಂಟೆ ಘಳಿಲೆಂದು । ಗಳಿಗ್ಯಾಗ
ಆಯ್ತು ಮಲ್ಲಯ್ಯನ ಶಿವಪೂಜೆ ॥

ಶಿವಪೂಜೆ ನಮ್ಮಿಂದಲೇ ಆಗಬೇಕು ಎಂಬ ಹಮ್ಮು ಜನಪದರಿಗಿಲ್ಲ. ಅನುದಿನದ ಬದುಕಿನಲ್ಲಿ ನಡೆಯುವ ಎಲ್ಲ ಪ್ರಕೃತಿ ಕ್ರಿಯೆಗಳೂ ಶಿವನಿಗೆ ಸಲ್ಲುವ ಪೂಜೆಗಳೆ.

ಹೀಗೆಂದು ನಮ್ಮ ಜನಪದರು ದೇಗುಲನಿರ್ಮಾಣದ ಸಂಸ್ಕೃತಿಗೆ ತೀರಾ ವಿಮುಖರಾದವರೇನಲ್ಲ. ಅವರು ತಮ್ಮದೇ ಆದ ವಿಶಿಷ್ಟರೀತಿಯ ದೇಗುಲಗಳನ್ನು ಸೃಷ್ಟಿಸಿಕೊಂಡಿದ್ದಾರೆ.

## ಗ್ರಾಮರಕ್ಷಕ ದೈವ

ನಮ್ಮ ನಾಡಿನ ಪ್ರತಿ ಗ್ರಾಮದಲ್ಲಿಯೂ ಒಂದಿಲ್ಲ ಒಂದು ಗುಡಿ ಇದ್ದೇ ಇದೆ. ಆ ಗುಡಿ ಪ್ರಧಾನವಾಗಿ ಗ್ರಾಮದೇವತೆಗೆ ಸಂಬಂಧಿಸಿದ್ದು. ಅಲ್ಲಿ ದೇವತೆಯ ಜನಪ್ರಿಯತೆಯಾಗಲಿ, ದೇಗುಲದ ಸೌಂದರ್ಯವೇ ಆಗಲಿ ಮುಖ್ಯವಾಗುವುದಿಲ್ಲ. ಬದಲಾಗಿ ತಮ್ಮನ್ನು ಮತ್ತು ತಮ್ಮ ಗ್ರಾಮವನ್ನು ಎಲ್ಲ ಬಗೆಯ ಭಯ ಮತ್ತು ರೋಗಗಳಿಂದ ಮುಕ್ತವಾಗಿಸುವ ಶಕ್ತಿ ಮಾತ್ರ ಪ್ರಧಾನವಾಗಿರುತ್ತದೆ. ಆ ಶಕ್ತಿಯನ್ನು ನಂಬಿ ತಮ್ಮ ಮುಗ್ಧಭಕ್ತಿಯ ಮೂಲಕ ಆರಾಧಿಸುತ್ತ ನಮ್ಮ ಜನಪದರು ನೆಮ್ಮದಿಯ ಬಾಳನ್ನು ಬದುಕಬಯಸಿದ್ದಾರೆ. ಸಾಮಾನ್ಯವಾಗಿ ಗ್ರಾಮದೇವತೆ ಹೆಣ್ಣುದೇವತೆಯೇ ಆಗಿರುತ್ತಾಳೆ. ಇದು ಮೂಲತಃ ನಮ್ಮ ನಾಡು ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಪರಂಪರೆಗೆ ಸೇರಿದುದರ ಪ್ರತೀಕವೇ ಆಗಿದೆ.

**'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು'** ಎಂಬ ಗೀತೆಯಲ್ಲಿ ಶ್ರೀ ಹುಯಿಲಗೋಳ ನಾರಾಯಣರಾಯರು ನಮ್ಮ ನಾಡನ್ನು **'ಹನುಮನುದಿಸಿದ ನಾಡು'** ಎಂದು ಹೆಮ್ಮೆಯಿಂದ ಹೇಳಿದ್ದಾರೆ. ಅವರ ಪ್ರಕಾರ ಹಂಪೆಯ ಬಳಿ ಇರುವ ಕಿಷ್ಕಿಂಧೆ ಹನುಮನ ಜನ್ಮಸ್ಥಳ. ಅಂತೆಯೇ ನಮ್ಮ ಜನಪದರು ಪ್ರತಿ ಗ್ರಾಮದ ಗಡಿಯಲ್ಲಿಯೂ ಒಂದೊಂದು ಹನುಮನ ಗುಡಿಯನ್ನು ನಿರ್ಮಿಸಿ ಇವನು ನಮ್ಮ ನಾಡಿಗೆ, ನಮ್ಮ ಗ್ರಾಮಕ್ಕೆ ರಕ್ಷಕದೈವ ಎಂಬ ಹೆಮ್ಮೆಯನ್ನು ಪ್ರದರ್ಶಿಸಿದ್ದಾರೆ.

ಊರ ಬಳಿ ಒಂದು ಚಿಕ್ಕ ಗುಡ್ಡವಿದ್ದರೂ ಸಾಕು, ದೂರ ದಲ್ಲಿರುವ ಶ್ರೀಶೈಲ ಮಲ್ಲಯ್ಯ, ತಿರುಪತಿ ತಿಮ್ಮಪ್ಪ ಅಲ್ಲಿ ಬಂದು ನೆಲೆ ನಿಲ್ಲುತ್ತಾರೆ. ಕನ್ನಡನಾಡಿನ ಬಹಳಷ್ಟು ಬೆಟ್ಟಗಳು ಮಲ್ಲಯ್ಯನ ಬೆಟ್ಟಗಳಾಗಿವೆ. ಶ್ರೀಶೈಲಕ್ಕೆ ಹೋಗಲಾಗದ ಜನ ಅನುದಿನ ತಮ್ಮ ಊರಬಳಿಯೇ ಇರುವ ಬೆಟ್ಟಕ್ಕೆ ಹೋಗಿ ತಮ್ಮ ಭಕ್ತಿಭಾವವನ್ನು ಸಮರ್ಪಿಸುತ್ತಾರೆ. 'ಅಲ್ಲಿ'ರುವ ಶಿವನನ್ನು 'ಇಲ್ಲಿ'ಯೇ ಕಾಣುತ್ತಾರೆ. ಅವರ ಭಕ್ತಿಯ ತೀವ್ರತೆ ಎಂತಹುದು ಎಂದರೆ ಒಬ್ಬ ಹೆಣ್ಣುಮಗಳು ಹೇಳುತ್ತಾಳೆ:

ಹೊತ್ತು ಮುಳುಗಿದರೇನು ಕತ್ತಲಾದರೇನು
ಅಪ್ಪ ನಿನ ಗುಡಿಗೆ ಬರುವೇನೊ । ಮಲ್ಲಯ್ಯ
ಮುತ್ತಿನ ಬಾಗಿಲ ತೆರೆದೀರೊ ॥

## ಭಾವೈಕ್ಯದ ಅಧಿದೈವ

ಹಲವಾರು ಪುರಾಣದೇವತೆಗಳೂ ನಮ್ಮ ಜನಪದರ ಭಕ್ತಿಸಾಮ್ರಾಜ್ಯದ ಅಧಿದೈವಗಳಾಗಿದ್ದಾರೆ. ಆದರೆ ಇಲ್ಲಿ ಜನಪದರು ಅವರಿಗೆ ಹೊಸ ಸಂಬಂಧದ ದೀಕ್ಷೆ ನೀಡಿದ್ದಾರೆ. ಸಮಾಜದಲ್ಲಿರುವ ಮೇಲುಕೀಳುಗಳನ್ನು ಹೋಗಲಾಡಿಸುವ ಹೊಸ ಸಂದೇಶವನ್ನು ವ್ಯಕ್ತಪಡಿಸಿದ್ದಾರೆ. ದೇವಾನುದೇವತೆಗಳೇ ಕೆಳವರ್ಗದವರನ್ನು ಪುರಸ್ಕರಿಸಿದ್ದಾರೆ ಎಂದು ಹೇಳುವ ಮೂಲಕ ಸಮಾಜದಲ್ಲಿರುವ ಭಿನ್ನಭಾವವನ್ನು ಅಲ್ಪಮಟ್ಟಿಗಾದರೂ ಹೋಗಲಾಡಿಸುವ ಪ್ರಾಮಾಣಿಕ ಪ್ರಯತ್ನ ಇಲ್ಲಿ ನಡೆದಿದೆ. **ನಂಜನಗೂಡಿನ ನಂಜುಂಡ, ಮೈಸೂರಿನ ಚಾಮುಂಡಿ, ಆದಿ ಚುಂಚನಗಿರಿಯ ಭೈರವ–ಮಾಳವ್ವ, ಬಿಳಿಗಿರಿಯ ರಂಗಯ್ಯ – ಕುಸುಮಾಲೆ, ಮೇಲುಕೋಟೆಯ ಚೆಲುವರಾಯ –ವರನಂದಿ (ಬೀಬಿ ನಾಚಿಯಾರ್)** ಇವರೆಲ್ಲ ನಮ್ಮ ಜನಪದರ ಹೃದಯವೈಶಾಲ್ಯ ಹಾಗೂ ಭಾವೈಕ್ಯದ ಸಂಕೇತವಾಗಿದ್ದಾರೆ. ಜೊತೆಗೆ, 'ದೈವ' ಎನ್ನುವ ಶಕ್ತಿ ಪ್ರತಿಯೊಬ್ಬರಲ್ಲಿಯೂ ಆತ್ಮವಿಶ್ವಾಸವನ್ನು ಮೂಡಿ ಸುವ ಚೇತನವಾಗಿ ಕಾರ್ಯ ನಿರ್ವಹಿಸುವುದನ್ನು ನಾವಿಲ್ಲಿ ಕಾಣುತ್ತೇವೆ. ಈ ಎಲ್ಲ ದೈವಸ್ಥಾನಗಳು ನಮ್ಮ ಜನಪದರ ಭಕ್ತಿ ಶ್ರದ್ಧೆಯ ಪುಣ್ಯತಾಣಗಳಾಗಿವೆ.

**ಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಜುಂಜಪ್ಪನ ಕಾವ್ಯ, ಮೈಲಾರಲಿಂಗನ ಕಾವ್ಯ** ಮತ್ತು **ಎಲ್ಲಮ್ಮನ ಕಾವ್ಯ** ಎಂದು ಕನ್ನಡದಲ್ಲಿ ಐದು ಪ್ರಮುಖ ಜನಪದ ಮಹಾಕಾವ್ಯಗಳಿವೆ. ಇವು ಜನಪದ ಧಾರ್ಮಿಕ ನಾಯಕರು ಜನರ ನಡುವೆಯೇ ಹುಟ್ಟಿ ತಮ್ಮ ಸಾಧನೆಗಳ ಮೂಲಕ ದೈವೀಪುರುಷರಾದ ಕಥೆಯನ್ನು ಸವಿಸ್ತಾರವಾಗಿ ಪ್ರಸ್ತಾಪಿಸುತ್ತವೆ.

**ಮಾದೇಶ್ವರ** ಮತ್ತು **ಮಂಟೇಸ್ವಾಮಿ** ಇವರು ಕರ್ನಾಟಕದ ದಕ್ಷಿಣಭಾಗದಲ್ಲಿ ಹುಟ್ಟಿ, ಉತ್ತರದ ಕಲ್ಯಾಣದಲ್ಲಿರುವ ಶರಣರ ಸಂಪರ್ಕವನ್ನು ಪಡೆದು, ಭಕ್ತಿಭಾವದ ಪರಂಪರೆಯೊಂದನ್ನು ಜನಮಾನಸದಲ್ಲಿ ಬಿತ್ತುತ್ತಾ, ಮತ್ತೆ ತಮ್ಮ ಸ್ವಕ್ಷೇತ್ರಕ್ಕೆ ಬರುತ್ತಾರೆ. ಮೂಲತಃ ಐತಿಹಾಸಿಕ ವ್ಯಕ್ತಿಗಳಾದ ಇವರು ತಮ್ಮ ಪವಾಡಸದೃಶ ವ್ಯಕ್ತಿತ್ವದ ಮೂಲಕ ಜನಪದರ ಆರಾಧ್ಯದೈವವೆನಿಸಿಕೊಂಡಿದ್ದಾರೆ.



ಮಲೆ ಮಾದೇಶ್ವರ ಬೆಟ್ಟದ ದೇವಸ್ಥಾನ

ಇವರು ನೆಲೆನಿಂತ ಮಲೆ ಮಾದೇಶ್ವರ ಬೆಟ್ಟ, ಕೊಳ್ಳೇಗಾಲ ತಾಲ್ಲೂಕಿನ ಚಿಕ್ಕಲ್ಲೂರಿನ ಸಿದ್ಧಪ್ಪಾಜಿ ಕ್ಷೇತ್ರ, ಕೃಷ್ಣರಾಜ ನಗರ ತಾಲ್ಲೂಕಿನ ಕಪ್ಪಡಿ ರಾಚಪ್ಪಾಜಿ ಕ್ಷೇತ್ರಗಳು ಪ್ರಮುಖ ಜನಪದ ಪುಣ್ಯಕ್ಷೇತ್ರಗಳಾಗಿವೆ.

ಕಾಡುಗೊಲ್ಲರ ಅಧಿದೈವ ಜುಂಜಪ್ಪ ಮತ್ತು ಗೊರವ ಸಂಪ್ರದಾಯದ ಮೈಲಾರ ಇವರಿಬ್ಬರೂ ಜನಪದ ಜಗತ್ತಿನ ಸಾಂಸ್ಕೃತಿಕ ವೀರರಾಗಿ ಜನಸಾಮಾನ್ಯರ ದೃಷ್ಟಿಯಲ್ಲಿ ಆರಾಧ್ಯರಾಗಿದ್ದಾರೆ. ಜುಂಜಪ್ಪ ನೆಲೆನಿಂತ ಶಿರಾ ತಾಲ್ಲೂಕಿನ ರಾಯಕಳವೇರಹಳ್ಳಿ ಮತ್ತು ಗುಬ್ಬಿ ತಾಲ್ಲೂಕಿನ ಹಾಗಲವಾಡಿಗಳು ಕಾಡುಗೊಲ್ಲರ ಯಾತ್ರಾಸ್ಥಳಗಳಾಗಿವೆ. ಕರ್ನಾಟಕದ ರಾಯಚೂರು, ಬೆಳಗಾವಿ, ಶಿವಮೊಗ್ಗ, ಧಾರವಾಡ, ಬಳ್ಳಾರಿ, ಬೀದರ ಜಿಲ್ಲೆಗಳಲ್ಲಿ ವಿವಿಧ ಮೈಲಾರಿ ಕ್ಷೇತ್ರಗಳಿವೆ. ಮೈಲಾರಲಿಂಗನ ಭಕ್ತರಾದ ಗೊರವರಿಗೆ ಇವು ಪವಿತ್ರ ತಾಣಗಳಾಗಿವೆ.

### ಸೃಷ್ಟಿಯ ಅಧಿದೇವತೆ

ಎಲ್ಲಮ್ಮ ಪ್ರಸಿದ್ಧವಾದ ಜನಪದ ದೇವತೆ. ಈಕೆಯನ್ನು ಪರಶುರಾಮನ ತಾಯಿ, ಜಮದಗ್ನಿ ಋಷಿಯ ಪತ್ನಿ ರೇಣುಕೆಯೆಂದೂ ಕರೆಯಲಾಗುತ್ತದೆ. ಆ ಮೂಲಕ ಜನಪದ ದೇವತೆ ಶಿಷ್ಟದೇವತೆಯಾಗಿ ರೂಪಾಂತರ ಹೊಂದುವ ಪ್ರಯತ್ನ ನಡೆದಿರುವುದನ್ನು ಇಲ್ಲಿ ಗುರುತಿಸಬಹುದು. ಎಲ್ಲಮ್ಮನನ್ನು ಕುರಿತು ಶಿಷ್ಟ ಮತ್ತು ಜನಪದ ಎರಡೂ ನೆಲೆಯ ಐತಿಹ್ಯಗಳಿವೆ. ಜೋಗಪ್ಪ, ಜೋಗವ್ವ ಎನ್ನುವ ಹೆಸರಿನಲ್ಲಿ ಗಂಡು-ಹೆಣ್ಣು ಇಬ್ಬರನ್ನೂ ತನ್ನ ವಿಶಿಷ್ಟ ಭಕ್ತರನ್ನಾಗಿ ರೂಪಿಸಿಕೊಂಡ ಶಕ್ತಿದೇವತೆ ಇವಳು. ಬೆಳಗಾವಿ ಜಿಲ್ಲೆಯ **ಸವದತ್ತಿ** ಮತ್ತು ಶಿವಮೊಗ್ಗ ಜಿಲ್ಲೆಯ **ಚಂದ್ರಗುತ್ತಿ** ಈಕೆಯ ಅಧಿಷ್ಠಾನ ಕ್ಷೇತ್ರಗಳಾಗಿವೆ. ದೇವದಾಸಿ ಮತ್ತು ಬೆತ್ತಲೆ ಸೇವೆಯಂತಹ ತೀರಾ ಮೌಢ್ಯ ಎನ್ನಿಸಿಕೊಳ್ಳುವ ಮತ್ತು ಮೂಲತಃ ಜನಪದ ವಿವೇಕಪ್ರಜ್ಞೆಗೆ ಹೊರತಾದ ಆಚರಣೆಗಳು ಈ ದೇವತೆಯ ಹೆಸರಿನಲ್ಲಿ ನಡೆದುಕೊಂಡು ಬಂದಿವೆ. ಆದರೆ ಎಲ್ಲಮ್ಮ ಏಳುಕೊಳ್ಳದ ತಾಯಿ; ಬನಶಂಕರಿಯಂತೆ ಸೃಷ್ಟಿಯ ಅಧಿದೇವತೆ, ಭೂಮಾತೆ. ಆಕೆಯ ಎದುರು ನಾವು ನಮ್ಮ ಸಿರಿಸಂಪತ್ತಿನ ಅಹಂಭಾವದ ಪ್ರದರ್ಶನ ಮಾಡದೆ ಸರಳವಾಗಿರಬೇಕು ಎಂಬ ಭಾವವೇ ಇಲ್ಲಿ ಪ್ರಮುಖವಾಗುತ್ತದೆ. ನಮ್ಮ ಜನಪದರಿಗೆ ದೈವವೇ ಗುರು, ಗುರುವೇ ದೈವ. ದೈವಸಮಾನವಾದ ಗುರುವಿಗೆ ಅವರು ತಮ್ಮನ್ನು ತಾವು ಅರ್ಪಿಸಿಕೊಂಡ ಪರಿ ವಿಶಿಷ್ಟವಾಗಿದೆ :

ಮನವ ಮಲ್ಲಿಗೆ ಮಾಡಿ ತನುವ ಕ್ಯಾದಿಗಿ ಮಾಡಿ
ನಸ್ನೈದು ಬೆರಳ ಸಮಮಾಡಿ । ನೀಡೇನ
ನನ್ನ ಸಲಹಂಥ ಗುರುವೀಗೆ ॥

### ಗುಡಿಗಟ್ಟಿ ನಿಂತ ಗುಡಿಗಳು

ಹೀಗೆ ಜನಪದರು ತಾವು ನಂಬಿದ ದೈವಕ್ಕೆ ತಮ್ಮನ್ನು ಮಾನಸಿಕವಾಗಿ ಸಂಪೂರ್ಣವಾಗಿ ಸಮರ್ಪಿಸಿಕೊಂಡವರು. ಅವರಲ್ಲಿ ಬುದ್ಧಿಗಿಂತ ಶ್ರದ್ಧೆಗೆ ಹಿರಿದಾದ ಸ್ಥಾನ. ತಾವು ನಂಬಿದ ದೈವದ ಬಗ್ಗೆ ಇನ್ನಿಲ್ಲದ ವಿಶ್ವಾಸ. ಆ ದೈವದ ಅನುಗ್ರಹದಿಂದಲೇ ತಾವು ನೆಮ್ಮದಿಯಿಂದ ಬಾಳುತ್ತಿದ್ದೇವೆಂಬ ನಚ್ಚುಗೆ ಅವರದು:

ಮಂದೇನ ಕೊಟ್ಟೀತ ಮನವೇನ ದಣದೀತ
ಮುಂಜಾನದಾನ ಗಿರಿಮಲ್ಲ । ಕೊಟ್ಟರ
ಮನತುಂಬಿ ನಮ್ಮ ಮನೆ ತುಂಬಿ ॥

'ಮುಂಜಾನದಾನ' ಎಂದರೆ ಪ್ರಾತಃಸ್ಮರಣೀಯ ಎಂದರ್ಥ. ನಮ್ಮ ಜನಪದರು ತಮ್ಮ ಬದುಕಿನ ಭಾಗ್ಯಕ್ಕೆ ಕಾರಣವಾದ ದೈವವನ್ನು ಪ್ರತಿನಿತ್ಯ ನೆನೆವವರು, ಕಾಣುವವರು. ಆದ್ದರಿಂದಲೇ ಅವರು ದೇವರನ್ನು ಕಾಣಲು ಮನೆ-ಮಠ ಬಿಟ್ಟು ದೂರಕ್ಕೆ ಹೋಗಲು ಸಿದ್ಧರಿಲ್ಲ. ಅವರಿಗೇನಿದ್ದರೂ ಮನೆಯಂಗಳವೇ ವಾರಾಣಸಿ. ಊರೇ ಶರಣಕ್ಷೇತ್ರ. ಸುತ್ತಲ ಪರಿಸರದಲ್ಲಿಯೇ ಅವರ ಮನದ ಮಹಾದೇವ ತುಂಬಿಕೊಂಡಿದ್ದಾನೆ. ಅವರು ಅನುದಿನ ಕಂಡು ಕೈಮುಗಿಯುವ ಗ್ರಾಮದೇವತೆ, ಸ್ಥಾನದೇವತೆ, ಕುಲದೇವತೆ, ಗೃಹದೇವತೆ, ಇಷ್ಟದೇವತೆಯರ ಗುಡಿಯೇ ಅವರ ಬಾಳಿನ ಪುಣ್ಯಕ್ಷೇತ್ರ. ಅಂತೆಯೇ ನಮ್ಮ ನಾಡಿನುದ್ದಗಲಕ್ಕೂ ನಮ್ಮ ನಾಡವರ ಭಕ್ತಿಯ ಬೆಳಸಿನ ಸಂಕೇತವಾಗಿ ಗುಡಿಗಳು ಗುಡಿಗಟ್ಟಿ ನಿಂತಿವೆ.